## ಮಂಗಳವಾರವೂ ವಿಶ್ವಾಸಮತ ಕೋರದ ಕಮಲ್‌ನಾಥ್

# ರಾಜ್ಯಪಾಲರಿಗೇ ಸರಕಾರದ ಸಡ್ಡು

**ಭೋಪಾಲ್:** ರಾಜ್ಯಪಾಲ ಲಾಲ್‌ಜಿ ಟಂಡನ್ ಅವರಿಗೇ ಸಡ್ಡು ಹೊಡೆದಿರುವ ಮಧ್ಯಪ್ರದೇಶ ಮುಖ್ಯಮಂತ್ರಿ ಕಮಲ್ ನಾಥ್ ಅವರು, ಕಾಂಗ್ರೆಸ್‌ನ 16 ಶಾಸಕರು ನಾಪತ್ತೆಯಾಗಿರುವ ಈಗಿನ ಸನ್ನಿವೇಶದಲ್ಲಿ ವಿಶ್ವಾಸಮತ ಕೋರುವುದು ಸಾಧ್ಯವೇ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಸೋಮವಾರ ವಿಧಾನಸಭೆ ಅಧಿವೇಶನ ಮುಂದೂಡಿಕೆಯಾದ ಬಳಿಕ ಕಮಲ್‌ನಾಥ್ ಅವರಿಗೆ ಬಹುಮತ ಸಾಬೀತುಪಡಿಸಲು ರಾಜ್ಯಪಾಲರು ಎರಡನೇ ಅವಕಾಶ ನೀಡಿದ್ದರು. ''ಮಂಗಳವಾರ ಸಂಜೆಯೊಳಗೆ ಬಹುಮತ ಸಾಬೀತುಪಡಿಸಬೇಕು. ಇಲ್ಲದಿದ್ದರೆ ನಿಮ್ಮ ಸರಕಾರಕ್ಕೆ ಬಹುಮತ ಇಲ್ಲ ಎಂಬುದಾಗಿ ಭಾವಿಸುತ್ತೇನೆ,'' ಎಂಬುದಾಗಿ ರಾಜ್ಯಪಾಲ ಟಂಡನ್ ತಮ್ಮ ಪತ್ರದಲ್ಲಿ ತಿಳಿಸಿದ್ದರು. ಅದಕ್ಕೆ ಮಂಗಳವಾರ ಉತ್ತರ ನೀಡಿರುವ ಕಮಲ್‌ನಾಥ್, ''ಸದ್ಯದ ಸ್ಥಿತಿಯಲ್ಲಿ ವಿಶ್ವಾಸಮತ ಕೋರುವುದು ಸಾಧ್ಯವಿಲ್ಲ. ಸಂಜೆಯೊಳಗೆ ಬಹುಮತ ಸಾಬೀತುಪಡಿಸದಿದ್ದರೆ ಸರಕಾರ ಬಹುಮತ ಇಲ್ಲವೆಂದು ಭಾವಿಸುವುದಾಗಿ ತಾವು ಹೇಳಿರುವುದು ಅಸಾಂವಿಧಾನಿಕವಾದದ್ದು,'' ಎಂದು ತಿಳಿಸಿದ್ದಾರೆ.

''ನಮ್ಮ ಪಕ್ಷದ 16 ಶಾಸಕರನ್ನು ಬಿಜೆಪಿ ಮುಖಂಡರು ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಕರೆದೊಯ್ದಿದ್ದಾರೆ. ಕರ್ನಾಟಕ ಪೊಲೀಸರ ನೆರವಿನಿಂದ ಅವರನ್ನು ಹೋಟೆಲ್/ರೆಸಾರ್ಟ್‌ನಲ್ಲಿ ಒತ್ತೆಯಾಳುಗಳಾಗಿ ಇರಿಸಿಕೊಳ್ಳಲಾಗಿದೆ. ಯಾರೂ ಅವರನ್ನು ಭೇಟಿ ಮಾಡುವಂತಿಲ್ಲ, ಆ ಶಾಸಕರು ಸಹ ಯಾರನ್ನೂ ಸಂಪರ್ಕಿಸುವಂತಿಲ್ಲ. ಆ ಶಾಸಕರನ್ನು ಬಿಡುಗಡೆಗೊಳಿಸಿ ಮುಕ್ತ ವಾತಾವರಣದಲ್ಲಿ ಒಂದು ವಾರ ಇರಿಸಬೇಕು. ಆ ನಂತರ ಅವರು ಯಾವುದೇ ತೀರ್ಮಾನ ಕೈಗೊಳ್ಳಬಹುದು. ನನ್ನ 40 ವರ್ಷಗಳ ಸುದೀರ್ಘ ರಾಜಕೀಯ ಬದುಕಿನಲ್ಲಿ ಯಾವತ್ತೂ ಪ್ರಜಾಪ್ರಭುತ್ವ ವಿರೋಧಿ ನಡೆ ಅನುಸರಿಸಿಲ್ಲ. ಈಗಿನ ಸನ್ನಿವೇಶದಲ್ಲಿ ವಿಶ್ವಾಸಮತ ಸಾಬೀತುಪಡಿಸುವಂತೆ ತಾವು ಕೋರಿರುವುದು ಸಮರ್ಥನೀಯವಲ್ಲ,'' ಎಂದು ಕಮಲ್‌ನಾಥ್ ಪತ್ರದಲ್ಲಿ ತಮ್ಮ ನಿರ್ಧಾರವನ್ನು ಖಚಿತಪಡಿಸಿದ್ದಾರೆ.



**ಕೊರೊನಾ ವೈರಸ್ ದೇಶಾದ್ಯಂತ ಭಾರಿ ಆತಂಕ ಸೃಷ್ಟಿಸಿದೆ. ಆದರ ನಡುವೆಯೇ ದೇಶದಲ್ಲಿ ವ್ಯಾಪಿಸಿರುವ ರಾಜಕೀಯ ವೈರಸ್ ಪ್ರತಿಪಕ್ಷಗಳ ಸರಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದೆ. ಮಹಾರಾಷ್ಟ್ರದಲ್ಲಿ ಈ ಪ್ರಯತ್ನ ಯಶಸ್ವಿಯಾಗದು.**
**- ಶಿವಸೇನೆ** 'ಸಾಮ್ನಾ' ಸಂಪಾದಕೀಯದಲ್ಲಿ

**ಸ್ಪೀಕರ್‌ಗೆ ರವಾನೆ:** ತ್ವರಿತವಾಗಿ ಬಹುಮತ ಸಾಬೀತಿಗೆ ಸೂಚಿಸಬೇಕೆಂದು ಕೋರಿ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಸೇರಿದಂತೆ ಬಿಜೆಪಿಯ 10 ಶಾಸಕರು ಸಲ್ಲಿಸಿರುವ ಅರ್ಜಿಯನ್ನು ಮಂಗಳವಾರ ವಿಚಾರಣೆಗೆ ಎತ್ತಿಕೊಂಡ ಸುಪ್ರೀಂ ಕೋರ್ಟ್, ವಿಶ್ವಾಸಮತ ಯಾಚನೆ ಕುರಿತು ನಿಲುವು ಸ್ಪಷ್ಟಪಡಿಸುವಂತೆ ಮುಖ್ಯಮಂತ್ರಿ ಕಮಲ್‌ನಾಥ್ ಮತ್ತು ಸ್ಪೀಕರ್ ಎನ್.ಪಿ.ಪ್ರಜಾಪತಿ ಅವರಿಗೆ ನೋಟಿಸ್ ನೀಡಿತು. ಬಳಿಕ ವಿಚಾರಣೆಯನ್ನು ಬುಧವಾರ ಬೆಳಗ್ಗೆ 10.30ಕ್ಕೆ ಮುಂದೂಡಿತು. ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡುತ್ತಿದ್ದಂತೆ ಕಮಲ್ ನಾಥ್ ಅವರು ರಾಜ್ಯಪಾಲರ ಪತ್ರವನ್ನು ಸ್ಪೀಕರ್‌ಗೆ ರವಾನಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

### ಸುಪ್ರೀಂಗೆ ಮನವಿ

- ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ 16 ಶಾಸಕರು. ''ಸ್ವಪ್ರೇರಣೆಯಿಂದ, ಯಾವುದೇ ಒತ್ತಡಕ್ಕೆ ಒಳಗಾಗದೇ ರಾಜೀನಾಮೆ ನೀಡಿದ್ದೇವೆ. ಅಂಗೀಕರಿಸುವಂತೆ ಸ್ಪೀಕರ್‌ಗೆ ನಿರ್ದೇಶನ ನೀಡಬೇಕು,'' ಎಂದು ಮನವಿ.
- ಮಧ್ಯಪ್ರದೇಶ ಕಾಂಗ್ರೆಸ್‌ನಿಂದಲೂ ಸುಪ್ರೀಂಗೆ ಅರ್ಜಿ, ಬೆಂಗಳೂರು ಹೊರವಲಯದ ರೆಸಾರ್ಟ್‌ನಲ್ಲಿರುವ ತಮ್ಮ ಶಾಸಕರನ್ನು ಭೇಟಿ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಕೋರಿಕೆ.
- ತಮ್ಮ ಕ್ಷೇತ್ರದ ಶಾಸಕ ಮುನ್ನಾಲಾಲ್ ಗೋಯಲ್ ಮಾರ್ಚ್ 9ರಿಂದ ನಾಪತ್ತೆಯಾಗಿದ್ದಾರೆ ಎಂದು ಭೋಪಾಲ್ ಹೈಕೋರ್ಟ್‌ಗೆ ವಕೀಲ ಉಮೇಶ್ ಕುಮಾರ್ ಬೊಹ್ರೆ ಅವರಿಂದ ಮಧ್ಯಪ್ರದೇಶ ಹೈಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಸಲ್ಲಿಕೆ.